# ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ: ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ:

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಮಂಡ್ಯ ಇವರ ಪತ್ರ ಸಂಖ್ಯೆ:ಉಕಾ2:ಜಿಪಂಮಂ:ಪಶಾ:ಸಿ4:ದೂರು:100:2016–17 ದಿನಾಂಕ 05.07.2017.
2) ಸರ್ಕಾರದ ಇದೇ ಸಮಸಂಖ್ಯೆಯ ಕಾರಣ ಕೇಳುವ ನೋಟಿಸ್, ದಿನಾಂಕ 05.08.2017
3) ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ಲಿಖಿತ ಹೇಳಿಕೆ, ದಿನಾಂಕ 22.08.2017
4) ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ಲಿಖಿತ ಹೇಳಿಕೆ, ದಿನಾಂಕ 26.08.2017
5) ಸರ್ಕಾರದ ಸಮಸಂಖ್ಯೆಯ ವಿಚಾರಣಾ ನೋಟೀಸ್, ದಿನಾಂಕ 04.12.2017

ಪ್ರಸ್ತಾವನೆ:

ಮೇಲೆ ಓದಲಾದ (1) ರಲ್ಲಿ ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ಬೇಬಿ ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾದ ಶ್ರೀ ಚಿಕ್ಕೇಗೌಡ ಹಾಗೂ ಸದಸ್ಯರಾದ ಶ್ರೀ ಮರಿಬೋರೇಗೌಡ ರವರು ಗ್ರಾಮ ಪಂಚಾಯತಿಯಲ್ಲಿ ಹಣಕಾಸು ಅವ್ಯವಹಾರ ನಡೆಸಿರುತ್ತಾರೆಂದು ಶ್ರೀ ಕೃಷ್ಣೇಗೌಡ ಬಿನ್ ಚಿಕ್ಕೇಗೌಡ, ಬಿದರಕಟ್ಟೆ ಗ್ರಾಮ ಬಸರಾಳು ಹೋಬಳಿ ಇವರು ದೂರು ಸಲ್ಲಿಸಿದ ಮೇರೆಗೆ ಸಹಾಯಕ ಯೋಜನಾಧಿಕಾರಿ ಮತ್ತು ಸಹಾಯಕ ಲೆಕ್ಕಾಧಿಕಾರಿ, ತಾಲ್ಲೂಕು ಪಂಚಾಯತ್ ಮಂಡ್ಯ ಇವರು ತನಿಖೆ ನಡೆಸಿ ವರದಿ ಸಲ್ಲಿಸಿದ್ದು, ವರದಿಯಲ್ಲಿ ಶ್ರೀ ಭೈರವೇಶ್ವರ ಎಲಕ್ಟ್ರಿಕಲ್ಸ್ ಇವರಿಂದ ಖರೀದಿಸಿದ ಸಾಮಾಗ್ರಿಗಳ ಬಾಬ್ತಿನ ಚೆಕ್ಕನ್ನು ಸಂಸ್ಥೆಯ ಹೆಸರಿಗೆ ಬದಲಾಗಿ ಉಪಾಧ್ಯಕ್ಷರಾದ ಶ್ರೀ ಚಿಕ್ಕೇಗೌಡ ಹಾಗೂ ಸದಸ್ಯರಾದ ಶ್ರೀ ಮರಿಬೋರೇಗೌಡ ಸದಸ್ಯರು ಇವರ ಹೆಸರಿಗೆ ಗ್ರಾಮ ಪಂಚಾಯತಿಯಿಂದ ನಿಯಮಬಾಹಿರವಾಗಿ ಪಿ.ಡಿ.ಓ ರವರು ವಿತರಿಸಿರುತ್ತಾರೆಂದು ತಿಳಿಸಿರುತ್ತಾರೆ. ಉಪಾಧ್ಯಕ್ಷರಾದ ಶ್ರೀ ಚಿಕ್ಕೇಗೌಡರವರ ಹೆಸರಿಗೆ ವಿತರಿಸಿರುವ ಚೆಕ್ ನಂ.81526 ರೂ.24,000 ಚೆಕ್ ನಂ.81528 ರೂ.26,190/ ಗಳು ಕೆನರಾ ಬ್ಯಾಂಕ್ ಬಸರಾಳು ಶಾಖೆಯಿಂದ ಶ್ರೀ ಚಿಕ್ಕೇಗೌಡರವರ ಖಾತೆ ಸಂಖ್ಯೆ 1297101014911 ಮತ್ತು ಕಾವೇರಿ ಗ್ರಾಮೀಣ ಬ್ಯಾಂಕ್ ಖಾತೆ ಚೆಕ್ ನಂ.469848 ದಿನಾಮಖ:18–05–2016 ರಂದು ರೂ.20,660 ಜಮೆಯಾಗಿರುತ್ತದೆ. ಸದಸ್ಯರಾದ ಶ್ರೀ ಮರಿಬೋರೇಗೌಡ ರವರ ಹೆಸರಿಗೆ ವಿತರಿಸಿರುವ ಚೆಕ್ ನಂ 81525 ರೂ.16400/– ಆಕ್ಸೀಸ್ ಬ್ಯಾಂಕ್ ನಲ್ಲಿ ನಗದೀಕರಣವಾಗಿರುತ್ತದೆ. ಉಪಾಧ್ಯಕ್ಷರಾದ ಶ್ರೀ ಚಿಕ್ಕೇಗೌಡ ಹಾಗೂ ಸದಸ್ಯರಾದ ಶ್ರೀ ಮರಿಬೋರೇಗೌಡ ಇವರುಗಳು 12(ಹೆಚ್)ರಂತೆ ನಿಯಮಬಾಹಿರವಾಗಿ ಗ್ರಾಮ ಪಂಚಾಯತ್ ಚೆಕ್ಕನ್ನು ಸ್ವಂತಕ್ಕೆ ಪಡೆದಿರುವುದರಿಂದ ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43–ಎ ಅನ್ವಯ ಕ್ರಮ ಜರುಗಿಸಲು ಮುಖ್ಯ ಕಾರ್ಯನಿವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಮಂಡ್ಯ ರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43ಎ ರನ್ವಯ ಗ್ರಾಮ ಪಂಚಾಯತಿ ಸದಸ್ಯ ಸ್ಥಾನದಿಂದ ಏಕೆ ವಜಾ ಮಾಡಬಾರದು ಎಂಬುದರ ಬಗ್ಗೆ 15 ದಿನಗಳೊಳಗಾಗಿ ವಿವರಣೆ ನೀಡುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ರವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ (3)ರಲ್ಲಿ ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ಸರ್ಕಾರದಿಂದ ನೀಡಲಾದ ಕಾರಣ ಕೇಳಿ ನೋಟೀಸಿಗೆ ಕೆಳಗಿನಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

"ನಾನು ಕೃಷಿಕನಾಗಿದ್ದು, ಗುತ್ತಿಗೆದಾರನಾಗಲಿ, ವ್ಯಾಪಾರಿಯಾಗಲಿ ಅಲ್ಲ ನನ್ನ ಬ್ಯಾಂಕ್ ಖಾತೆಗೆ ಜಮೆಯಾದ ಹಣ ಕೈತಪ್ಪಿನಿಂದಾಗಿದ್ದು, ಸದರಿ ಕಹಣವನ್ನು ಅಧ್ಯಕ್ಷರು ಮತ್ತು ಅಭಿವೃದ್ಧಿ ಅಧಿಕಾರಿಯವರು ಲಿಖಿತವಾಗಿ ಬರೆದುಕೊಟ್ಟು, ನನ್ನಿಂದ ಹಣ ಪಡೆದು ಸಂಬಂಧಿಸಿದವರಿಗೆ ನೀಡಿರುತ್ತಾರೆ. ನನ್ನ ಮೇಲಿನ ಆರೋಪ ಕೇವಲ ರಾಜಕೀಯ ದುರುದ್ದೇಶಪೂರಿತ ವಾಗಿದ್ದು ಅಧಿಕಾರಿಗಳ ವರದಿಯಲ್ಲಿ ಸತ್ಯಾಂಶವೇ ಇರುವುದಿಲ್ಲವೆಂದು ಹಾಗೂ ಅಭಿವೃದ್ಧಿ ಅಧಿಕಾರಿಗಳು ಮತ್ತು ಅಧ್ಯಕ್ಷರು ಬರೆದು ಕೊಟ್ಟಿರುವ ಪತ್ರದ ನಕಲನ್ನು ಲಗತ್ತಿಸಿರುತ್ತೇನೆಂದು" ತಿಳಿಸಿರುತ್ತಾರೆ.

ಮೇಲೆ ಓದಲಾದ (4)ರಲ್ಲಿ ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ರವರು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಪ್ರಮುಖ ಅಂಶಗಳನ್ನು ತಿಳಿಸಿರುತ್ತಾರೆ.

"ನೋಟೀಸ್‌ನಲ್ಲಿ ತಿಳಿಸಿದಂತೆ ನಾನು ನಿಯಮಬಾಹಿರವಾಗಿ ಸ್ವಂತಕ್ಕೆ ಚೆಕ್‌ನ್ನು ಪಡೆದುಕೊಂಡಿರುವುದಿಲ್ಲ 2015-16 ನೇ ಸಾಲಿನ ಹನಗನಹಳ್ಳಿ ಗ್ರಾಮ ದೇವತೆ ಹಬ್ಬದ ದಿನ ಕುಡಿಯುವ ನೀರಿನ ಸ್ಥಾವರಗಳು ಸುಟ್ಟು ಹೋದ ಕಾರಣ ಸಾರ್ವಜನಿಕರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕಾಗಿತ್ತು ಅದಕ್ಕೆ ಪಿಡಿಓ ರವರನ್ನುಕೋರಿಕೊಳ್ಳಲಾಗಿ ಅವರು ತಮ್ಮ ವತಿಯಿಂದ ಕೂಡಲೇ ಕ್ರಮ ಕೈಗೊಳ್ಳಲು ಮತ್ತು ಹಣ ಖರ್ಚು ಮಾಡಲು ಅವಕಾಶ ಇಲ್ಲದ ಕಾರಣ ನನಗೆ ಪರ್ಯಾಯ ವ್ಯವಸ್ಥೆಯನ್ನು ನಾನೇ ಹಣ ಖರ್ಚು ಮಾಡಿ ಕಾರ್ಯಗತ ಮಾಡಿಕೊಳ್ಳಬೇಕೆಂದು ಮತ್ತು ನಂತರದಲ್ಲಿ ನನ್ನಿಂದ ಖರ್ಚಾಗುವ ಹಣಕ್ಕೆ ಪಂಚಾಯತಿ ವತಿಯಿಂದ ಚೆಕ್ ನೀಡುವುದಾಗಿ ತಿಳಿಸಿದರು. ಅದರಂತೆ ಪಂ.ಅ.ಅ ರವರು ನಾನು ಖರ್ಚು ಮಾಡಿದ್ದು 16400-00 ರೂ ಗಳನ್ನು ನನ್ನ ಹೆಸರಿಗೆ ಚೆಕ್‌ನ್ನು ಕೊಟ್ಟಿರುತ್ತಾರೆ. ಗ್ರಾಮದಲ್ಲಿ ತುರ್ತು ಪರಸ್ಥಿತಿ ಇದ್ದುದರಿಂದ ಪಂಚಾಯತಿ ಪರವಾಗಿ ಖರ್ಚು ಮಾಡಿದ್ದರಿಂದ ಆ ಹಣಕ್ಕೆ ಪಂ.ಅ.ಅ ಯವರು ಸದ್ಭಾವನೆಯಿಂದ ಚೆಕ್ ನೀಡಿರುತ್ತಾರೆ ವಿನ: ಅನ್ಯಥಾ ಅಲ್ಲ ಒಂದು ವೇಳೆ ಅಂತಹ ತುರ್ತು ಸಂದರ್ಭದಲ್ಲೂ ಸಹ ಸದಸ್ಯರು ಕ್ರಮ ಕೈಗೊಳ್ಳುವುದು ಸರಿಯಲ್ಲವೆಂದು ತಾವು ಭಾವಿಸಿದರೆ ಇಂತಹ ಕ್ರಮಗಳನ್ನು ಮುಂದೆ ನಾನು ಎಂದೂ ಸಹ ಕೈಗೊಳ್ಳುವುದಿಲ್ಲವೆಂದು ಆದ್ದರಿಂದ ನನ್ನ ವಿರುದ್ಧ ಕ್ರಮ ಜರುಗಿಸುವುದನ್ನು ಕೈಬಿಟ್ಟು, ಸದುದ್ದೇಶದಿಂದ ಆಗಿರುವ ಈ ಒಂದು ಕ್ರಮವನ್ನು ಮನ್ನಿಸಬೇಕಾಗಿ" ತಿಳಿಸಿರುತ್ತಾರೆ.

ಮೇಲೆ ಓದಲಾದ (5) ರನ್ವಯ ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ಇವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ನ್ಯಾಯಾಲಯದಲ್ಲಿ ದಿನಾಂಕ 28.12.2017 ರಂದು ಜರುಗಿದ ವಿಚಾರಣೆಯಲ್ಲಿ, ಆಪಾದಿತ ಉಪಾಧ್ಯಕ್ಷರು ಮತ್ತು ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಸಹಾಯಕ ಕಾರ್ಯದರ್ಶಿ-2 ಜಿಲ್ಲಾ ಪಂಚಾಯತಿ ಮಂಡ್ಯ, ತಾಲ್ಲೂಕು ಯೋಜನಾಧಿಕಾರಿ, ತಾಲ್ಲೂಕು ಪಂಚಾಯತಿ, ಮಂಡ್ಯ ಹಾಗೂ ಪಂಚಾಯತಿ ಅಭಿವೃದ್ಧಿ ಅದಿಕಾರಿ, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ರವರು ಹಾಜರಿದ್ದರು. ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಇವರುಗಳು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ.

ಸರ್ಕಾರವು ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಮಂಡ್ಯ ರವರ ಪ್ರಸ್ತಾವನೆಗಳು, ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಲಿಖಿತ ಹೇಳಿಕೆಗಳು ಹಾಗೂ ಆಪಾದಿತ ಸದಸ್ಯರ ಹೇಳಿಕೆಗಳನ್ನು ಪರಿಶೀಲಿಸಿ, ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ತುರ್ತು ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಮಾಡಿರುವ ಖರ್ಚನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ನೇರವಾಗಿ ಶ್ರೀ ಮರಿಬೋರೇಗೌಡ ರವರಿಗೆ ಚೆಕ್ ನೀಡಿದ್ದು ಕಂಡುಬಂದಿದ್ದು, ಹಾಗೂ ಕುಡಿಯುವ ನೀರಿನ ಸ್ಥಾವರಗಳ ದುರಸ್ಥಿ ಮಾಡಿದ ಬಾಬ್ತು ಚೆಕ್ ನಂ.81526 ರೂ.24,000/-ಮತ್ತು ಚೆಕ್ ನಂ.81528 ರೂ.26,190/-ಗಳನ್ನು ದುರಸ್ಥಿಗಾರರಾದ ಶ್ರೀ ಚಿಕ್ಕೇಗೌಡರಿಗೆ ನೀಡಿದ ಚೆಕ್ ಉಪಾಧ್ಯಕ್ಷರಾದ ಶ್ರೀ ಚಿಕ್ಕೇಗೌಡ ಇವರ ಬ್ಯಾಂಕ್ ಖಾತೆಗೆ ಕೈತಪ್ಪಿನಿಂದಾಗಿ ಜಮೆಯಾಗಿದ್ದು, ಸದರಿ ಚೆಕ್ ಮೊತ್ತವನ್ನು ದುರಸ್ಥಿಗಾರರಾದ ಶ್ರೀ ಚಿಕ್ಕೇಗೌಡರವರಿಗೆ ಹಿಂದಿರುಗಿಸಿರುವುದಾಗಿ ಹೇಳಿಕೆ ನೀಡಿರುವ ಇರುವ ಹಿನ್ನಲೆಯಲ್ಲಿ ಎಚ್ಚರಿಕೆ ನೀಡಿ ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ

ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 43(ಎ) ರಡಿ ಜರುಗಿಸಬೇಕಾದ ಕ್ರಮವನ್ನು ಕೈಬಿಟ್ಟು ಪ್ರಕರಣವನ್ನು ಮುಕ್ತಾಯಗೊಳಿಸಲು ನಿರ್ಧರಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 764 ಗ್ರಾಪಂಅ 2017 ಬೆಂಗಳೂರು, ದಿನಾಂಕ: 03.02.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ಇವರ ಹೇಳಿಕೆ ಹಾಗೂ ಮೌಖಿಕ ವಿಚಾರಣೆಯ ಹಿನ್ನೆಲೆಯಲ್ಲಿ ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಮತ್ತು ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ ಇವರಿಗೆ ಎಚ್ಚರಿಕೆಯನ್ನು ನೀಡಿ, ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 43(ಎ) ರಡಿ ಪ್ರಾರಂಭಿಸಲಾದ ವಿಚಾರಣೆಯನ್ನು ಕೈಬಿಟ್ಟು, ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್),
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮಂಡ್ಯ ಜಿಲ್ಲೆ.
2. ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ.
3. ಶ್ರೀ ಚಿಕ್ಕೇಗೌಡ ಉಪಾಧ್ಯಕ್ಷರು ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ
4. ಶ್ರೀ ಮರಿಬೋರೇಗೌಡ ಸದಸ್ಯರು, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ.
5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೇಬಿ ಗ್ರಾಮ ಗ್ರಾಮ ಪಂಚಾಯತಿ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ. ಗಣಕ ಶಾಖೆ/ಕರ್ನಾಟಕ ವಿಕಾಸ
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿಯನ್ನು ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.